# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬೃ.ಬೆ.ಮ.ಪಾ/ಸಕಾಅ/ಬೊಉ/ಪಿಆರ್/ /2021-22

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
(ನೋಡಲ್ ಅಧಿಕಾರಿ) ಬೊಮ್ಮನಹಳ್ಳಿ ಉಪವಿಭಾಗ
ಕೋಡಿಚಿಕ್ಕನಹಳ್ಳಿ ಮುಖ್ಯರಸ್ತೆ, ಬಿಳೇಕಹಳ್ಳಿ
ಬೆಂಗಳೂರು-560076. ದಿನಾಂಕ: 06/11/2021

## ದಿನಾಂಕ: 06.11.2021 ರಂದು ನಡೆದ ಸಭಾ ನಡವಳಿಗಳು

ವಾರ್ಡ್ ಸಮಿತಿಯ ಹಾಜರಿದ್ದವರು

1. ಶ್ರೀ ಎಸ್.ಇ ಶ್ರೀನಿವಾಸ್ – ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ ಕೆ.ಪಿ ಉಮೇಶ್ – ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ವಾರ್ಡ್-175.
3. ಶ್ರೀ ರಾಮ್ ಮೋಹನ್ ರಾಜು – ಮಾಜಿ ಉಪ-ಮಹಾಪೌರರು.
4. ಶ್ರೀ ದಯಾನಂದ್ – ಮಾರ್ಷಲ್.
5. ಶ್ರೀ ಮಹೇಶ್ ಕುಮಾರ್ ಎಸ್ – ಕಿರಿಯ ಅಭಿಯಂತರರು (BESCOM).
6. ಶ್ರೀ ವಾಲು ರಾಠೋರ್ಡ್ – ಕಾರ್ಯಪಾಲಕ ಅಭಿಯಂತರರು (Project Bommanahalli).
7. ಶ್ರೀ/ಶ್ರೀಮತಿ ಶುಶ್ಮ ಎಂ.ಎಸ್ – ಕಿರಿಯ ಆರೋಗ್ಯ ಪರಿವೀಕ್ಷಕರು.
8. ಶ್ರೀ ಪ್ರಶಾಂತ್ ಕುಮಾರ್ – ಸಹಾಯಕ ಅಭಿಯಂತರರು (Electrical).
9. ಶ್ರೀ ಟಿ.ಆರ್ ನಾರಾಯಣ – ಕಂದಾಯ ಪರಿವೀಕ್ಷಕರು.
10. ಶ್ರೀ ಜಯಪ್ರಕಾಶ್ ಬಿ.ಕೆ – ಸಹಾಯಕ ಅಭಿಯಂತರರು (BWSSB).
11. ಶ್ರೀ ಸಂತೋಷ್ ಪ್ರಸಾದ್ ಎಂ – ಸಹಾಯಕ ಅಭಿಯಂತರರು (BWSSB).

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಎಸ್.ಇ ಶ್ರೀನಿವಾಸ್ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಶ್ರೀ ಕೆ.ಪಿ ಉಮೇಶ್ ಸಹಾಯಕ ಅಭಿಯಂತರರು ಹಾಗೂ ಸಮಿತಿ ಕಾರ್ಯದರ್ಶಿಗಳು ಸಭೆಗೆ ಆಗಮಿಸಿದ ಎಲ್ಲಾರಿಗೂ ಸ್ವಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು ಹಾಗೂ ಅಧ್ಯಕ್ಷರವರನ್ನು ವಾರ್ಡ್ ಸಭೆಯ ಕುಂದುಕೊರತೆಗಳ ಬಗ್ಗೆ ಸವಿಸ್ಥಾರವಾಗಿ ಪ್ರಸ್ಥಾಪಿಸಲು ಕೋರಲಾಯಿತು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ 175ರ ವ್ಯಾಪ್ತಿಯಲ್ಲಿ ಬರುವ ಘನತ್ಯಾಜ್ಯ, ರಸ್ತೆಗಳ ಗುಂಡಿ ಮುಂಚ್ಚುವ, ಬೀಧಿ ದೀಪ ನಿರ್ವಹಣೆ ಹಾಗೂ ಇತರೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಸದಸ್ಯರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ದಿನಾಂಕ:- 06.11.2021 ರಂದು ನಡೆದ ಸಭಾ ನಡುವಳಿಗಳನ್ನು ಇಲಾಖಾ ವಾರು ಈ ಕೆಳಕಂಡಂತೆ ದಾಖಿಲಿಸಲಾಯಿತು.

1. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಇಲಾಖೆ:-

ಈ ವಿಷಯವಾಗಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿಗೆ ಸಂಬಂಧಿಸಿದಂತೆ ಶ್ರೀ ಸಂತೋಷ್ ಪ್ರಸಾದ್ ಎಂ ರವರು ಹಾಜರಿದ್ದು ಹಾಗೂ 5 ಜನ ವಾಲ್ವ್ ಮ್ಯಾನ್‌ಗಳು ಸಹಾ ಸಭೆಯಲ್ಲಿ ಹಾಜರಿರುತ್ತಾರೆ ಮತ್ತು ಉಚಿತವಾಗಿ ಕುಡಿಯುವ ನೀರಿನ ಟ್ಯಾಂಕರ್ ಮತ್ತು ಟ್ರಾಕ್ಟರ್‌ಗಳು ಯಾವುದೇ ಲೀಕೇಜ್ ಇಲ್ಲದೆ ಕೆಲಸ ನಿರ್ವಹಿಸುತ್ತಿವೆಂದು ಮತ್ತು ಪಾರ್ಕ್‌ಗಳಲ್ಲಿ ನೀರು ಬಿಡುವುದಕ್ಕೆ EE (Horticulture) ರವರ ಪತ್ರ ಬೇಕೆಂದು ಸಭೆಯಲ್ಲಿ ಶ್ರೀ ಸಂತೋಷ್ ಪ್ರಸಾದ್ ಎಂ ರವರು ತಿಳಿಸಿದರು.

Scanned with CamScanner

ಮುಂದುವರೆದಂತೆ, ಬೋರ್‌ವೆಲ್ ನಿರ್ವಹಣೆಗೆ ಸಂಬಂಧಿಸಿದಂತೆ ಶ್ರೀ ರಂಗರಾಜು ರವರು ಹಾಜರಿದ್ದರು ಈ ಹಿಂದೆ ಚರ್ಚಿಸಲಾದ ನೀರು ಸರಬರಾಜು ಮತ್ತು ಒಳಚರಂಡಿ ನಿರ್ವಹಣೆ ಬಗ್ಗೆ ಗಮನ ಸೆಳೆದು ಈಗಾಗಲೇ ಸದರಿ ವಾರ್ಡಿನಲ್ಲಿ ಒಟ್ಟು ಎಷ್ಟು ಬೋರ್‌ವೆಲ್‌ಗಳಿವೆ, ಎಷ್ಟು ಬೋರ್‌ವೆಲ್‌ಗಳು ಕಾರ್ಯನಿರ್ವಹಿಸುತ್ತಿವೆ ಮತ್ತು ಎಷ್ಟು ಬೋರ್‌ವೆಲ್‌ಗಳು ಕಾರ್ಯನಿರ್ವಹಿಸುತ್ತಿಲ್ಲ ಎಂಬುದರ ಬಗ್ಗೆ ಸಭೆಯಲ್ಲಿ ವಿವರಗಳನನು ನೀಡಿದ್ದು ಹಾಗೂ ಹೊಸದಾಗಿ ಯಾವುದೇ ಬೋರ್‌ವೆಲ್‌ಗಳನ್ನು ಕೊರೆಯಬಾರದೆಂದು ತಿಳಿಸಿದರು ಇದರ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ಮಂಜುನಾಥ್ ರೆಡ್ಡಿ ಮತ್ತು ಶ್ರೀ ಮಧೂಸೂಧನ್ ರೆಡ್ಡಿ ರವರು ಪುನಃ ಪರಿಶೀಲಿಲನೆ ಮಾಡಲು ತಿಳಿಸಿದರು (ದೂರವಾಣಿ ಸಂಖ್ಯೆ:- 9008089894)

2. ತೋಟಗಾರಿಕೆ ಮತ್ತು ಪಾರ್ಕ್ ಅಭಿವೃಧ್ಧಿ:-

ಹಿಂದೆ ಗೈರು ಹಾಜರಾಗಿದ್ದರ ಬಗ್ಗೆ ಸಮಜಾಯಿಷಿ ನೀಡಲು ಸಮಿತಿ ಕೇಳಿರುವ ಈ ದಿನ ಅವರು ಹಾಜರಾಗಿದ್ದು ಸಭೆಯಲ್ಲಿ ಸಮಜಾಯಿಷಿ ನೀಡಿದರು ಮಂಜುನಾಥ ರೆಡ್ಡಿಯವರು ಈ ಬಗ್ಗೆ ಸಮಜಾಯಿಷಿ ಪರಿಶೀಲಿಸಿದರು ಇನ್ನು ಮುಂದೆ ಈ ರೀತಿ ಮಾಡುವುದಿಲ್ಲ ಎಂದು ಸಭೆಯಲ್ಲಿ ಹೇಳಿದರು.

ನೀರು ಹಾಕಿಸಿದ್ದಾರೆ ಹುಣಸೇ ಮರದ ಪಾರ್ಕ್‌ನಲ್ಲಿ ಬೋರ್ ಇಲ್ಲಾ ಟ್ಯಾಂಕ್ ಮುಖಾಂತರ ಸರಬರಾಜು ಮಾಡುತ್ತಿದ್ದಾರೆಂದು ಸಭೆಯಲ್ಲಿ ಹಾಜರಿದ್ದ ನರಸಪ್ಪನವರು ಹೇಳಿದರು ಎಲ್ಲಾ ಪಾರ್ಕ್‌ಗಳಲ್ಲಿ ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸಿರುತ್ತಾರೆಂದು ಬೆಳಿಗ್ಗೆ: 07.10 ಹಾಗೂ ಸಾಯಂಕಾಲ 4.0 ಕ್ಕೆ ಹಾಗೂ ವಿದ್ಯುತ್ ಸ್ಟ್ರೀಟ್ ಲೈಟ್ ನಿರ್ವಹಿಸುತ್ತಿದ್ದಾರೆ. Sap ಮಾಡಿ ಓನ್ ಹೆಡ್ ನಿಂದ ನೀರನ್ನು ಹಾಕುವ ಪದ್ಧತಿ ಮುಂದುವರಿಸಲು ಸೂಚಿಸಿದರು ಹಕ್ಕಿ ಪಕ್ಷಿಗಳು ಕುಡಿಯುವುದಕ್ಕೆ ಉದ್ದೇಶಿಸಲಾಗಿದೆ. ನ್ಯಾನಪ್ಪನಹಳ್ಳಿ ಪಾರ್ಕ್ ನೀರು ಬಿಡುವುದಿಲ್ಲ ಎಂದು ಸಭೆಯಲ್ಲಿ ಆಪಾದಿಸಿದರು.

3. ಬೆಸ್ಕಾಂ ಇಲಾಖೆ:-

ಈ ವಿಷಯವಾಗಿ ಸಂಬಂಧಿಸಿದಂತೆ ಶ್ರೀ ಮಹೇಶ್ ರವರು ಹಾಜರಿದ್ದರು, ಈಗಾಗಲೇ ಓ.ಎಫ್.ಸಿ ಕೇಬಲ್ ತೆರವುಗೊಳಿಸಲು ಕ್ರಮ ಕೈಗೊಂಡಿರುವ ಬಗ್ಗೆ ತಿಳಿಸಿರುತ್ತಾರೆ ಹಾಗೂ ಸ್ಲಮಂ ರಸ್ತೆಗಳಲ್ಲಿರುವ ತುರ್ತಾಗಿ ಓ.ಎಫ್.ಸಿ ಕೇಬಲ್ ತೆರವುಗೊಳಿಸಲು ಮೊದಲ ಆಧ್ಯತೆ ನೀಡಿದ್ದೇವೆಂದು ಸಭೆಯಲ್ಲಿ ತಿಳಿಸಿದರು ಹಳೆಯ ಕೇಬಲ್ ಮತ್ತು ಕಂಬಗಳನ್ನು ತೆರವುಗೊಳಿಸಲು ಸಭೆಯಲ್ಲಿ ಹಾಜರಿದ್ದ ಶ್ರೀ ಮಂಜುನಾಥ್ ರೆಡ್ಡಿ ವಿಶಾಲವಾಗಿ ಚರ್ಚೆಮಾಡಿದರು ಮತ್ತು 175 ಬೊಮ್ಮನಹಳ್ಳಿಯಲ್ಲಿ 80% ಕಾಮಗಾರಿ ಪೂರ್ಣಗೊಂಡಿದೆಂದು ತಿಳಿಸಿದರು.

4. ಬೀದಿ ದೀಪ ನಿರ್ವಹಣೆ:-

ಈ ವಿಷಯವಾಗಿ ಬೀದಿ ದೀಪ ನಿರ್ವಹಣೆಗೆ ಸಂಬಂಧಿಸಿದಂತೆ ವಿರಾಟನಗರದಲ್ಲಿ ಹೊಸದಾಗಿ ಒಂದು ಕಂಭದ ಜೊತೆಗೆ ಬೀದಿ ದೀಪ ಅಳವಡಿಸಲು ಹಾಗೂ 5ನೇ ಅಡ್ಡರಸ್ತೆ ಮಸೀದ್ ಹತ್ತಿರ 2 ಬೀದಿ ದೀಪಗಳನ್ನು ಮತ್ತು ಜಿ.ಪಿ.ಎಸ್ ಕ್ಯಾಮರ ಅಳವಡಿಸಲು ಸಭೆಯಲ್ಲಿ ಹಾಜರಿದ್ದ ಸಭೆಯ ಸದಸ್ಯರಾದ ಶ್ರೀ ಮಂಜುನಾಥ್ ರೆಡ್ಡಿ ರವರು ತಿಳಿಸಿದರು ಈ ವಿಷಯದ ಸಲುವಾಗಿ ಶ್ರೀ ನೋಡಲ್ ಅಧಿಕಾರಿಯವರು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಮುಂದುವರೆದಂತೆ, ಕೊನೆಯಲ್ಲಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳ ಅನುಮತಿ ಮೇರೆಗೆ ಸದಸ್ಯ ಕಾರ್ಯದರ್ಶಿಗಳಾದ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ಕೆ.ಪಿ ಉಮೇಶ್ ರವರು ಎಲ್ಲಾರಿಗೂ ವಂದಿಸಿ, ಸಭೆ ಮುಕ್ತಾಯಗೊಳಿಸಿದರು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ಆದೇಶದ ಮೇರೆಗೆ.

ಸಹಿ/-
ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 175, ಬೊಮ್ಮನಹಳ್ಳಿ

ಸಹಿ/-
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ. 175, ಬೊಮ್ಮನಹಳ್ಳಿ

Scanned with CamScanner

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ಬಿಬಿಎಂಪಿ ರವರಿಗೆ ಸಲ್ಲಿಸಲಾಗಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ರವರಿಗೆ ಸಲ್ಲಿಸಲಾಗಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ರವರಿಗೆ ಸಲ್ಲಿಸಲಾಗಿದೆ.
4. ಮುಖ್ಯ ಅಭಿಯಂತರರು, ಬೊಮ್ಮನಹಳ್ಳಿ ವಲಯ, ರವರಿಗೆ ಸಲ್ಲಿಸಲಾಗಿದೆ.
5. ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಿಭಾಗ, ರವರಿಗೆ ಸಲ್ಲಿಸಲಾಗಿದೆ.
6. ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್-175 ಬೊಮ್ಮನಹಳ್ಳಿ ರವರಿಗೆ ಸಲ್ಲಿಸಲಾಗಿದೆ.
7. ಅಧೀಕ್ಷಕರು ತೋಟಗಾರಿಕೆ ಇಲಾಖೆ, ಬೊಮ್ಮನಹಳ್ಳಿ ರವರಿಗೆ ಸಲ್ಲಿಸಲಾಗಿದೆ.
8. ಠಾಣಾಧಿಕಾರಿಗಳು ಬೊಮ್ಮನಹಳ್ಳಿ ಪೋಲಿಸ್ ಠಾಣೆ ರವರ ರವರಿಗೆ ಸಲ್ಲಿಸಲಾಗಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯಾ ನಿರ್ವಹಣೆ ರವರಿಗೆ ಸಲ್ಲಿಸಲಾಗಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಸಲ್ಲಿಸಲಾಗಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ, ಬೊಮ್ಮನಹಳ್ಳಿ ರವರಿಗೆ ಸಲ್ಲಿಸಲಾಗಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ಒಳಚರಂಡಿ ಮತ್ತು ನೀರು ಸರಬರಾಜು ರವರಿಗೆ ಸಲ್ಲಿಸಲಾಗಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ರವರಿಗೆ ಸಲ್ಲಿಸಲಾಗಿದೆ.
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ಉಪ-ವಿಭಾಗ ರವರಿಗೆ ಸಲ್ಲಿಸಲಾಗಿದೆ.
15. ವಲಯ ಅರಣ್ಯಾಧಿಕಾರಿಗಳು ಬೊಮ್ಮನಹಳ್ಳಿ ವಲಯ ರವರಿಗೆ ಸಲ್ಲಿಸಲಾಗಿದೆ.
16. ಸಹಾಯಕ ಕಂದಾಯ ಅಧಿಕಾರಿಗಳು ಬೊಮ್ಮನಹಳ್ಳಿ ರವರಿಗೆ ಸಲ್ಲಿಸಲಾಗಿದೆ.
17. ಆರೋಗ್ಯ ಪರಿವೀಕ್ಷಕರು ಬೊಮ್ಮನಹಳ್ಳಿ ರವರಿಗೆ ಸಲ್ಲಿಸಲಾಗಿದೆ.
18. ಕಛೇರಿ ಪ್ರತಿ.

ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 175, ಬೊಮ್ಮನಹಳ್ಳಿ

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ. 175, ಬೊಮ್ಮನಹಳ್ಳಿ

Scanned with CamScanner